ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

ಡಿಜಿಟಲ್ ನ್ಯೂಸ್ ಕಹಾನಿ

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue:157 ಸಂಚಿಕೆ: 157 | Date:12-07-2026 Sunday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಜನರಿಗೆ ಖಾಯಂ ನಿವಾಸ ಪ್ರಮಾಣಪತ್ರ: ಡಾ. ಜಿ. ಪರಮೇಶ್ವರ

ಬೆಂಗಳೂರು, : ಚುನಾವಣಾ ಆಯೋಗದವರು ಎಸ್‌ಐಆರ್ ಪ್ರಕ್ರಿಯೆಯಲ್ಲಿ13 ದಾಖಲೆಯನ್ನು ಕೇಳುತ್ತಾರೆ. ಅದರಲ್ಲಿ ನೀವು ಸ್ಥಂತ ಮನೆಯಲ್ಲಿ ಇದ್ದೀರಾ? ಎಂಬ ಪ್ರಶ್ನೆಯೂ ಇದೆ. ಹಾಗಾಗಿ ನಾವು ಖಾಯಂ ನಿವಾಸ ಪ್ರಮಾಣಪತ್ರವನ್ನು ನೀಡಲು ಕ್ರಮ ವಹಿಸುವುದಾಗಿ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ ಅವರು ತಿಳಿಸಿದರು.

ತಮ್ಮ ಸದಾಶಿವನಗರದ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈವರೆಗೆ ಕೇಂದ್ರ ಸರ್ಕಾರ ಯಾವುದೇ ಪ್ರಮಾಣಪತ್ರಗಳನ್ನು ನೀಡಿಲ್ಲ. ಜಾತಿ ಪ್ರಮಾಣಪತ್ರವನ್ನು ಕೂಡ ರಾಜ್ಯ ಸರ್ಕಾರವೇ ನೀಡಿದೆ. ನಾವು ಆಧಾರ್ ಕಾರ್ಡ್ ಮತ್ತು ಆಗ್ಕ ದಾಖಲೆಗಳನ್ನು ಹರಿಬಿಲು ಖಾಯಂ ನಿವಾಸ ಪ್ರಮಾಣಪತ್ರ ನೀಡುತ್ತೇವೆ. ಅದರಲ್ಲಿ ತಪ್ಪೇನಿದೆ? ಎಲ್ಲದರಲ್ಲೂ ಬಿಜೆಪಿ ರಾಜಕಾರಣ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗಾಗಲೇ ಸುಮಾರು 50 ರಿಂದ 60 ಸಾವಿರ ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣಪತ್ರ ಇಲ್ಲದೆ ಸಿಇಟಿ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಸಮಸ್ಯೆಯಾಗಿದೆ. ಈಗ ನಾವು ಖಾಯಂ

ಪ್ರಮಾಣ ಪತ್ರದಲ್ಲಿ ಜಾತಿಯನ್ನು ಉಲ್ಲೇಖಿಸಿದರೆ ಪರೀಕ್ಷೆ ಬರೆಯುವ ಮಕ್ಕಳಿಗೆ ಅನುಕೂಲವಾಗುತ್ತದೆ. ಬಿಜೆಪಿಗರು ಎಲ್ಲವನ್ನೂ ರಾಜಕೀಯ ದೃಷ್ಟಿಯಿಂದ ನೋಡುವುದು ಸರಿಯಲ್ಲ ಎಂದು ಹೇಳಿದರು.

ಬಾಂಗ್ಲಾದೇಶದವರಿಗೂ ಖಾಯಂ ನಿವೇಶನ ಪತ್ರ ನೀಡಲಾಗುತ್ತಿದೆ ಎಂಬ ಬಿಜೆಪಿ ಆರೋಪ ಸತ್ಯಕ್ಕೆ ದೂರವಾದದ್ದು ಬಾಂಗ್ಲಾದೇಶದ ಪ್ರಶ್ನೆಯೇ ಇಲ್ಲ ಬರುವುದಿಲ್ಲ. ಇದು ರಾಷ್ಟ್ರೀಯ ಸಮಸ್ಯೆ ರಾಜ್ಯ ಸರ್ಕಾರ ಬಾಂಗ್ಲಾದೇಶದಿಗೆ ಪೌರತ್ವ ಕೊಡಲು ಆಗುತ್ತದೆಯೇ? ಒಂದು ವೇಳೆ ಬಾಂಗ್ಲಾದೇಶದವರು ನಮ್ಮ ದೇಶದವರನ್ನು ಮಾರುವೆಯಾದರೆ, ಆಗ ಅದಕ್ಕೊಂದು ನಿಬಂಧನೆಯಿದೆ. ಅದು ಬಿಟ್ಟು ಬಾಂಗ್ಲಾದೇಶದವರಿಗಾಗಲಿ ಅಥವಾ ಬೇರೆ ದೇಶದವರಿಗಾಗಲಿ ಪೌರತ್ವವನ್ನು ರಾಜ್ಯ ಸರ್ಕಾರ ಕೊಡಲು ಆಗುವುದಿಲ್ಲ ಎಂದು ಈ ವೇಳೆ ಸ್ಪಷ್ಟಪಡಿಸಿದರು.

ಎಸ್‌ಆರ್ ಪ್ರಕ್ರಿಯೆ ನಡೆಯುತ್ತಿರುವಾಗಲೇ ಬಿಬಿಎ ಚುನಾವಣೆ ಮಾಡಬಹುದು. ಆದರೆ ಚುನಾವಣಾ ಆಯೋಗ ಅದಕ್ಕೆ ಅನುಮತಿ ನೀಡುವುದಿಲ್ಲ. ವಿಶೇಷ ಅನುಮತಿ ನೀಡಿದರೆ ನಾವು ಚುನಾವಣೆಯನ್ನು ಮಾಡಲು ಸಿದ್ಧರಿದ್ದೇವೆ ಎಂದರು.

ಇ-ಖಾತೆ, ಹಕ್ಕುಪತ್ರಗಳ ಕೆಲಸಗಳಿಗೆ ವೇಗ ನೀಡಲು ಜುಲೈ 12, ಭಾನುವಾರ ಎಲ್ಲಾ ಉಪ ನೋಂದಣಿ ಕಚೇರಿಗಳು ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ ಎಂದ ಅವರು, ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಹೈಕಮಾಂಡ್ ತೀರ್ಮಾನಿಸುವುದಾಗಿ ತಿಳಿಸಿದರು.

ವಿಯೆಟ್ನಾಂನಲ್ಲಿ ಬೋಟ್ ಮುಳುಗಿ 15 ಭಾರತೀಯ ಪ್ರವಾಸಿಗರು ಸಾವು; ಪ್ರಧಾನಿ ಮೋದಿ ಸಂತಾಪ

ವಿಯೆಟ್ನಾಂನ ಫೂ ಕ್ವೋಕ್ ದ್ವೀಪದ ಸಮೀಪವಿರುವ ಹಾನ್ ಮೇ ರುತ್ ನ್ಯೂಯೆ ಎಂಬಲ್ಲಿ ಇಂದು 32 ಭಾರತೀಯ ಪ್ರವಾಸಿಗರಿದ್ದ ಬೋಟ್ ಮುಳುಗಿದೆ. ಇದರಲ್ಲಿ 15 ಜನರು ಸಾವನ್ನಪ್ಪಿದ್ದಾರೆ ಎಂದು ವಿಯೆಟ್ನಾಂ ಮಾಧ್ಯಮಗಳು ವರದಿ ಮಾಡಿದೆ. ಈ ಘಟನೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ಸೂಚಿಸಿದ್ದಾರೆ. ವಿಯೆಟ್ನಾಂನಲ್ಲಿ ಭಾರತೀಯ ನಾಗರಿಕರು ಒಳಗೊಂಡಿರುವ ಬೋಟ್ ಅಪಘಾತದ ದುರಂತ ಸುದ್ದಿ ಕೇಳಿ ಅತ್ಯಂತ ಆಘಾತವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನನ್ನ ಪ್ರಾಮಾಣಿಕ ಸಾಂತ್ವನಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ನಮ್ಮ ರಾಯಭಾರ ಕಚೇರಿ ಮತ್ತು ಕಾನ್ಸುಲೇಟ್ ಕಚೇರಿಗಳು ಸಾಧ್ಯವಿರುವ ಎಲ್ಲಾ ನೆರವು ನೀಡುತ್ತಿವೆ. ನಮ್ಮ ಅಧಿಕಾರಿಗಳು ವಿಯೆಟ್ನಾಂ ಅಧಿಕಾರಿಗಳೊಂದಿಗೆ ನಿಕಟ ಸಂ ಪರ್ಕದಲ್ಲಿದ್ದಾರೆ" ಎಂದು ತಿಳಿಸಿದ್ದಾರೆ. 32 ಭಾರತೀಯ ಪ್ರವಾಸಿಗರು ಮತ್ತು ನಾಲ್ಕರು ಸ್ಪಿಬಂದಿ ಸೇರಿದಂತೆ ಒಟ್ಟು 36 ಜನರಿದ್ದ ಈ ಸ್ಪೀಡ್ ಬೋಟ್ ಹಾನ್ ಮೇ ರುತ್ ದ್ವೀಪದಿಂದ ಪ್ರಯಾಣಿಸುತ್ತಿದ್ದಾಗ, ಕರಾವಳಿಯಿಂದ ಕೇವಲ 400 ಮೀಟರ್ ದೂರದಲ್ಲಿ ತಲೆಕೆಳಗಾಗಿ ಪಲ್ಟಿಯಾಗಿದೆ. ಸ್ಥಳೀಯ ರಕ್ಷಣಾ ಅಧಿಕಾರಿಗಳು ತಕ್ಷಣವೇ ಕಾರ್ಯಾಚರಣೆ ನಡೆಸಿ ಬೋಟ್‌ನ ಒಳಗಿನಿಂದ 21 ಜನರನ್ನು ರಕ್ಷಿಸಿದ್ದಾರೆ. ಆದರೆ, ದುರದೃಷ್ಟವಶಾತ್ ಇಬ್ಬರು ಮಹಿಳೆಯರು ಮತ್ತು 13 ಪುರುಷರು ಸೇರಿದಂತೆ ಒಟ್ಟು 15 ಭಾರತೀಯ ಪ್ರವಾಸಿಗರು ಈ ಅಪಘಾತದಲ್ಲಿ ಸಾವನ್ನಪ್ಪಿರುವುದು ದೃಢಪಟ್ಟಿದೆ.

ಆಂಧ್ರಪ್ರದೇಶದ ಪ್ರವಾಸಿಗರು:

ಮಾಧ್ಯಮಗಳ ವರದಿ ಪ್ರಕಾರ, ಈ ಪ್ರವಾಸಿಗರು ಆಂಧ್ರಪ್ರದೇಶಕ್ಕೆ ಸೇರಿದ ಒಂದೇ ಗುಂಪಿನವರಾಗಿದ್ದಾರೆ ಎನ್ನಲಾಗಿದೆ. ಬೋಟ್‌ನಲ್ಲಿ 32 ಭಾರತೀಯರೊಂದಿಗೆ ನಾಲ್ವರು ಸ್ಪಿಬಂದಿ ಇದ್ದರು. ಸ್ಥಳೀಯ ಕಾಲಮಾನ ಮಧ್ಯಾಹ್ನ ಸುಮಾರು 1 ಗಂಟೆಗೆ, ಪ್ರವಾಸಿಗರನ್ನು ಹಾನ್ ಮೇ ರುತ್‌ನಿಂದ ಅನ್ ಥೋಯ್ ಬಂದರಿಗೆ ಕರೆದೊಯ್ಯುತ್ತಿದ್ದಾಗ ಬೋಟ್ ಪಲ್ಟಿಯಾಗಿದೆ. ಈ ಬೋಟ್ 'ಒಷಿಯನ್ ಪರ್ಲ್ ಐಲ್ಯಾಂಡ್ ಕಂಪನಿ' ನಿರ್ವಹಿಸುತ್ತಿತ್ತು.

ಡಿಸೆಂಬರ್ 2027ಕ್ಕೆ ತುಮಕೂರು–ರಾಯದುರ್ಗ ರೈಲು ಸಂಚಾರ ಪ್ರಾರಂಭ: ವಿ.ಸೋಮಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ: 2.500 ಸಾವಿರ ಕೋಟಿ.ರೂ ವೆಚ್ಚದ ತುಮಕೂರು–ರಾಯದುರ್ಗ ರೈಲ್ವೆ ಮಾರ್ಗ ಡಿಸೆಂಬರ್–2027ಕ್ಕೆ ರೈಲು ಸಂಚಾರ ಪ್ರಾರಂಭವಾಗಲಿದೆ ಎಂದು ಕೇಂದ್ರ ಜಲಶಕ್ತಿ ಮತ್ತು ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ತಿಳಿಸಿದರು.

ಅವರು ಕೊರಟಗೆರೆ ಪಟ್ಟಣದ ಹೊರ ಹೊಲಯದ ಬೈಪಾಸ್ ಬಳಿ ರೈಲ್ವೆ ನಿಲ್ದಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಸುಮಾರು20 ವರ್ಷಗಳಿಂದ ನೆನೆಗುದ್ದಿಗೆ ಬಿದ್ದಿದ್ದ ತುಮಕೂರು–ರಾಯದುರ್ಗ ರೈಲು ಮಾರ್ಗ ಎರಡು ವರ್ಷಗಳಿಂದ ವೇಗದ ಚಾಲನೆ ಪಡೆದುಕೊಂಡಿದೆ. ಇಂದು ತುಮಕೊರಿನಿಂದ–ಪಾವಗಡದವರೆಗೆ ನಾಲ್ಕ ರೈಲ್ವೆ ನಿಲ್ದಾಣಗಳ ಶಂಕುಸ್ಥಾಪನೆ ಕಾರ್ಯ ನೆರವೇರಲಿದೆ. ಕೊರಟಗೆರೆಯಲ್ಲಿ ಊರುಬಿಕೆ ಮತ್ತು ಕೊರಟಗೆರೆ ಮಾರ್ಗದ 18 ಕಿ.ಮೀ ಕಾಮಗಾರಿಗೆ ಚಾಲನೆ ದೊರೆತಿದ್ದು ಇದು ಪಾವಗಡದವರೆಗೆ ಮುಂದುವರೆಯಲಿದೆ, ಒಟ್ಟು 207 ಕಿ.ಮೀ ವ್ಯಾಪ್ತಿಯ ತುಮಕೂರು–ರಾಯದುರ್ಗ ರೈಲ್ವೆ ಮಾರ್ಗದಲ್ಲಿ 137 ಕಿ.ಮೀ ಮಾರ್ಗವು ಪೂರ್ಣಗೊಂಡಿದ್ದು, ಇನ್ನು 80 ಕಿ.ಮೀ ರೈಲ್ವೆ ಮಾರ್ಗವು ಪೂರ್ಣಗೊಳ್ಳಬೇಕಿದೆ ಇದಕ್ಕೆ ನಮ್ಮ ಪ್ರಧಾನಮಂತ್ರಿ ನರೇಂದ್ರಮೋದಿಯವರ ದೂರದೃಷ್ಟಿ ಮತ್ತು ಅಭಿವೃದ್ಧಿ ಪರಸ್ಥಿತಿ ಮುಖ್ಯ ಕಾರಣವಾಗಿದೆ ಎಂದರು.

ಪ್ರಸ್ತುತ ತುಮಕೂರಿನಿಂದ–ದಾವಣಗೆರೆ ನೂತನ ರೈಲು ಮಾರ್ಗ ಆಗುತ್ತಿದ್ದು ಸುಮಾರು 60 ಕಿ.ಮೀ ಪ್ರಯಾಣವು ಜನರಿಗೆ ಕಡಿಮೆಯಾಗಲಿದೆ. ಇದರೊಂದಿಗೆ ಜಿಲ್ಲೆಯಿಂದ ನಗರದಿಂದಬಹವಸಬಳ್ಳ ಮೂಲಕ ಚಿಕ್ಕಬಳ್ಳಾಪುರ ನಗರಕ್ಕೆ 650 ಕೋಟಿ.ರೂ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿಯು ಪೂರ್ಣಗೊಳ್ಳಿತ್ತಿದ್ದು, ಅದೇ ರೀತಿ ನೆಲಮಂಗಲ ತಾಲೂಕಿನ

ದಾಬಸ್‌ಪೇಟೆ ಯಿಂದ ಕೊರಟಗೆರೆ, ಮಧುಗಿರಿ,ಪಾವಗಡ ಮೂಲಕ ಕಲ್ಯಾಣದುರ್ಗ್‌ಕ್ಕೂತನವಾಗಿ ರಾಷ್ಟ್ರೀಯ ಹೆದ್ದಾರಿಯನ್ನು ಪ್ರಾರಂಭಿಸಲಾಗುತ್ತಿದೆ. ಅಭಿವೃದ್ಧಿ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದಾಗಬೇಕಿದ್ದರೆ ಅಭಿವೃದ್ಧಿಗೆ ಕುಂತಿತವಾಗುತ್ತದೆ ಎಂದರು.

ಸಂವಿಧಾನದಂತೆ ನಡೆಯಬೇಕು

ಬಾಬಾ ಸಾಹೆಬರ ಸಂವಿಧಾನದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ತಮ್ಮದೇ ಆದ ಕರ್ತವ್ಯಗಳಿವೆ. ಅದನ್ನು ಮೀರಿ ಹೊರ ದೇಶದವರಿಗೆ ಕಳ್ಳತನದಿಂದ ಪೌರತ್ವ ನೀಡುವುದು ಸಂವಿಧಾನದ ಉಲ್ಲಂಘನೆಯಾಗುತ್ತದೆ. ಕೇಂದ್ರ ಸರ್ಕಾರದ ಎಸ್‌ಐಆರ್ ನೀತಿಯನ್ನು ರಾಜ್ಯ ಸರ್ಕಾರಗಳು ತಪ್ಪು ದಾರಿ ಹಿಡಿದರೆ ಅದು ಕಾನೂನು ಉಲ್ಲಂಘನೆಯಾಗುತ್ತದೆ, ಇದನ್ನು ರಾಜ್ಯ ಸರ್ಕಾರಗಳು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದರು.

ಎನ್‌ಡಿಎ ಮುಖಂಡರ ಮೇಲೆ ಬೇಸರ:

ಕಾರ್ಯಕ್ರಮದಲ್ಲಿ ಬೆರಳೆಣಿಕೆಯ ಜನರು ಭಾಗವಹಿಸಿದ್ದನ್ನು ಕಂಡು ಕೇಂದ್ರ ಸಚಿವ ವಿ.ಸೋಮಣ್ಣ ಎನ್‌ಡಿಎ ಮುಖಂಡರ ಮೇಲೆ ಬೇಸರ ವ್ಯಕ್ತಪಡಿಸಿದರು. 2.500 ಕೋಟಿ.ರೂ ವೆಚ್ಚದ ಕಾಮಗಾರಿ ಚಾಲನೆಗೆ ಜನರೇ ಬರದಿದ್ದರೇ ಹೇಗೆ, ಮುಖಂಡರಾದ ನೀವುಗಳು ಏನು ಮಾಡುತ್ತೀರಾ? ಇನ್ನು ಮುಂದೆಯಾದರೂ ಒಗ್ಗಟ್ಟಾಗಿ ಕೆಲಸ ಮಾಡಿ ನಮ್ಮ ಕೆಲಸಗಳು ಜನರಿಗೆ ತಲುಪುವಲ್ಲಿ ಜನಪ್ರತಿನಿಧಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೇ ತಮ್ಮ ಸಂದೇಶ ಹೋಗುತ್ತದೆ ಎಂದು ಬಿಜೆಪಿ ಮುಖಂಡರನ್ನು ತರಾಟೆಗೆ ತೆಗೆದುಕೊಂಡರು.

ಸರ್ಕಾರಿ ಕಾರ್ಯಕ್ರಮದಲ್ಲಿ ಮುಖಂಡರದ್ದೇ ದರ್ಬಾರ್:

ಕೇಂದ್ರ ಸರ್ಕಾರದ ಈ ಸರ್ಕಾರಿ ಕಾರ್ಯಕ್ರಮದಲ್ಲಿರುವ ಇಲಾಖೆಯ ಒಬ್ಬ ಅಧಿಕಾರಿ ಮತ್ತು ಗುತ್ತಿಗೆದಾರ ವೇದಿಕೆಯ ಆಸನದಲ್ಲಿ ಇದ್ದಿದ್ದು ಬಿಟ್ಟರೆ ಉಳಿದ ಎಲ್ಲಾ ಆಸನಗಳು ಮುಖಂಡರೇ ತುಂಬಿಕೊಂಡಿದ್ದರು, ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಮತ್ತು ವಿಭಾಗೀಯ ಮಟ್ಟದ ಅಧಿಕಾರಿಗಳು ಹೊರಗೆ ಬಿಸಿಲಿನಲ್ಲಿ ನಿಂತು ನೋಡುತ್ತಿದ್ದರು, ಕನಿಷ್ಠ ಸೌಜನ್ಯಕ್ಕೂ ಅವರನ್ನು ವೇದಿಕೆ ಕಾರ್ಯಕ್ರಮಕ್ಕೆ ಕರೆಯಲಿಲ್ಲ, ಕಾರ್ಯಕ್ರಮ ಕೊರೆಯಲ್ಲಿ ಇವರನ್ನು ನೋಡಿದ ಕೇಂದ್ರ ಸಚಿವರು ಧನ್ಯವಾದ ತಿಳಿಸದರು. ಈ ಕಾರ್ಯಕ್ರಮದಲ್ಲಿ ರೈಲ್ವೆ ಅಧಿಕಾರಿ ಪ್ರಕಾರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ದರ್ಶನ್ ಕೆ.ಎಲ್, ಮುಖಂಡ ಅನಿಲ್‌ಕುಮಾರ್, ಜೆಡಿಎಸ್ ಅಧ್ಯಕ್ಷ ಕಾಮರಾಜು, ಬಿಜೆಪಿ ಅಧ್ಯಕ್ಷ ರುದ್ರೇಶ್, ಮಾಜಿ ಅಧ್ಯಕ್ಷ ಪವನ್‌ಕುಮಾರ್,ನರಸಿಂಹರಾಜು, ಲಕ್ಷ್ಮಣ್, ಕೆ.ಎನ್. ಲಕ್ಷ್ಮೀನಾರಾಯಣ್ ಸೇರಿದಂತೆ ಇತರರು ಹಾಜರಿದ್ದರು.

106 ಎಕರೆ ಸರ್ಕಾರಿ ಜಾಗದಲ್ಲಿ ಸಮಗ್ರ ಜಿಲ್ಲಾ ಆಡಳಿತ ಸಂಕೀರ್ಣ ನಿರ್ಮಿಸಬೇಕು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ಸಮೀಪದ ಗೂಳೂರು ಹೋಬಳಿಯ ಕೊಡಾಪುರ ಹಾಗೂ ಕಲ್ಲುಮಳ ಗ್ರಾಮದ ವ್ಯಾಪ್ತಿಯ ಸುಮಾರು 106 ಎಕರೆ 23 ಗುಂಟೆ ಮೌಲ್ಯದ ಸಾರ್ವಜನಿಕ ಆಸ್ತಿಯನ್ನು ಸರ್ಕಾರದ ಸ್ವಾಧೀನಕ್ಕೆ ತಂದು ಖಾಸಗಿ ವ್ಯಕ್ತಿಗಳ ಪಾಲಾಗದಂತೆ ರಕ್ಷಿಸುವ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರ ಐತಿಹಾಸಿಕ ಕ್ರಮವನ್ನು ಸಾಮಾಜಿಕ ಹೋರಾಟಗಾರ ವಿನಯ್ ಹೆಚ್ ಗೌಡ ಹೃತ್ಪೂರ್ವಕವಾಗಿ ಸ್ವಾಗತಿಸಿ ಅಭಿನಂದಿಸಿದ್ದಾರೆ.

ತುಮಕೂರು ನಗರದಿಂದ ಕೇವಲ 7 ಕಿ.ಮೀ. ದೂರದಲ್ಲಿರುವ ಈ ಜಾಗವು ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಅಮೂಲ್ಯವಾಗಿದೆ. ಇದೇ ಭಾಗದ ಬಿದರಕಟ್ಟೆ ಗ್ರಾಮದಲ್ಲಿ ತುಮಕೂರು ವಿಶ್ವವಿದ್ಯಾಲಯ ಈಗಾಗಲೇ ಕಾರ್ಯನಿರ್ವಹಿಸುತ್ತಿರುವುದರಿಂದ, ಈ ಪ್ರದೇಶವು ಭವಿಷ್ಯದಲ್ಲಿ ವಿಕ್ಷಣ ಆಡಳಿತ ಕೇಂದ್ರವಾಗಿ ಬೆಳೆಯುವ ಎಲ್ಲ ಸಾಧ್ಯತೆಗಳಿವೆ. ತುಮಕೂರು ನಗರದ ಸಮೀಪದಲ್ಲೇ ಒಂದೇ ಸ್ಥಳದಲ್ಲಿ 106 ಎಕರೆ 23 ಗುಂಟೆ ವಿಸ್ತೀರ್ಣದ ಸರ್ಕಾರಿ ಜಾಗ ಲಭ್ಯವಿರುವುದು ಅತ್ಯಂತ ಅಪರೂಪದ ಅವಕಾಶವಾಗಿದೆ. ಇಂತಹ ವಿಶಾಲವಾದ ಸರ್ಕಾರಿ ಭೂಮಿ ಮುಂದೆ ಮತ್ತೆ

ಲಭ್ಯವಾಗುವ ಸಾಧ್ಯತೆ ಅತ್ಯಂತ ಕಡಿಮೆ. ಆದ್ದರಿಂದ ಈ ಅಮೂಲ್ಯ ಜಾಗವನ್ನು ದೂರದೃಷ್ಟಿಯಿಂದ ಬಳಸಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಈ ಜಾಗದಲ್ಲಿ ಸಮಗ್ರ ಜಿಲ್ಲಾ ಆಡಳಿತ ಸಂಕೀರ್ಣ ನಿರ್ಮಿಸಿ, ಜಿಲ್ಲಾಧಿಕಾರಿಗಳ ಕಚೇರಿ, ಉಪ ವಿಭಾಗಾಧಿಕಾರಿಗಳ ಕಚೇರಿ, ತಹಶೀಲ್ದಾರರ ಕಚೇರಿ, ಜಿಲ್ಲಾ ನ್ಯಾಯಾಲಯ, ಉಪ ನೊಂದಣಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಕೃಷಿ ಇಲಾಖೆ ಸೇರಿದಂತೆ ಜಿಲ್ಲೆಯ ಎಲ್ಲ ಪ್ರಮುಖ ಸರ್ಕಾರಿ ಇಲಾಖೆಗಳ ಕಚೇರಿಗಳಿಗೆ ಅಗತ್ಯವಾದ ಜಾಗವನ್ನು ಶಾಶ್ವತವಾಗಿ ಮಂಜೂರು ಮಾಡಬೇಕು.

ಪ್ರಸ್ತುತ ಹಲವು ಇಲಾಖೆಗಳ ಕಚೇರಿಗಳು ನಗರದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ಒಂದೇ ಕೆಲಸಕ್ಕಾಗಿ ಅನೇಕ ಕಡೆ ಅಲೆದಾಡಬೇಕಾದ ಪರಿಸ್ಥಿತಿ ಇದೆ. ಎಲ್ಲಾ ಪ್ರಮುಖ ಸರ್ಕಾರಿ ಕಚೇರಿಗಳು ಒಂದೇ ಸ್ಥಳದಲ್ಲಿ ಸ್ಥಾಪನೆಯಾದರೆ ಸಾರ್ವಜನಿಕರಿಗೆ ಸುಲಭವಾಗಿ ಸೇವೆಗಳು ದೊರೆಯುವುದರ ಜೊತೆಗೆ ಆಡಳಿತದ ಕಾರ್ಯಕ್ಷಮತೆ ಹೆಚ್ಚಲಿದೆ.

ಅಲ್ಲದೆ, ಭವಿಷ್ಯದ ಅಗತ್ಯಗಳಿಗೆ ಅನುಗುಣವಾಗಿ ಯೋಜಿತ ರೀತಿಯಲ್ಲಿ ಸರ್ಕಾರಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಅನುಕೂಲವಾಗುವುದರೊಂದಿಗೆ ನಗರದ ವಾಹನ ದಟ್ಟಣೆ ಕಡಿಮೆಯಾಗಿ ಸಾರ್ವಜನಿಕರ ಸಮಯ ಹಾಗೂ ಪೆಟ್ರೋಲ್ ಉಳಿತಾಯವಾಗಲಿದೆ ಎಂದರಿಂದ ರಾಜ್ಯ ಸರ್ಕಾರವು ಈ 106 ಎಕರೆ 23 ಗುಂಟೆ ಸರ್ಕಾರಿ ಜಾಗವನ್ನು ಯಾವುದೇ ರೀತಿಯ ಖಾಸಗಿ ಅಥವಾ ವಾಣಿಜ್ಯ ಉದ್ದೇಶಗಳಿಗೆ ಬಳಸದೆ, ತುಮಕೂರು ಜಿಲ್ಲೆಯ ಮುಂದಿನ ಹಲವು ದಶಕಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ಜಿಲ್ಲಾ ಆಡಳಿತ ಸಂಕೀರ್ಣ ನಿರ್ಮಾಣಕ್ಕೆ ಮೀಸಲಿಟ್ಟು ಜಿಲ್ಲೆಯ ಎಲ್ಲಾ ಪ್ರಮುಖ ಸರ್ಕಾರಿ ಇಲಾಖೆಗಳ ಕಚೇರಿಗಳಿಗೆ ಜಾಗ ಮಂಜೂರು ಮಾಡಬೇಕು ಎಂದು ಸಾಮಾಜಿಕ ಹೋರಾಟಗಾರ ವಿನಯ್ ಹೆಚ್ ಗೌಡ ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್‌ನ ಮಂಚೂಣಿ ಘಟಕಗಳಿಗೆ ಎಸ್.ಐ.ಆರ್ ಕುರಿತು ಕಾರ್ಯಾಗಾರ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಎಸ್.ಐ.ಆರ್ ಮತ್ತು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲಾ ಕಾಂಗ್ರೆಸ್‌ನ ಮಂಚೂಣಿ ಘಟಕಗಳ ಅಧ್ಯಕ್ಷರುಗಳು, ವಿವಿಧ ವಿಭಾಗಗಳ ಅಧ್ಯಕ್ಷರುಗಳ ಸಭೆಯಲ್ಲಿ ಡಿಸಿಸಿ ಅಧ್ಯಕ್ಷ ಜಿ.ಚಂದ್ರಶೇಖರಗೌಡ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ, ಭಾರತ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕೇವಲ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಿಗೆ ಅಸ್ತಯವಾಗದೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಇದೇ ಮತದಾರರ ಪಟ್ಟಿ ಬಳಕೆ ಮಾಡುವುದರಿಂದ ಕಾಂಗ್ರೆಸ್ ಮುಖಂಡರು ತಮ್ಮ ವ್ಯಾಪ್ತಿಯ ಮತಗಟ್ಟೆಗಳಲ್ಲ

"ನಾವೀನ್ಯತೆ ಮತ್ತು ಡಿಜಿಟಲ್ ಪರಿವರ್ತನೆಯ ಯುಗದಲ್ಲಿ ನಿಯಂತ್ರಣ ವ್ಯವಹಾರಗಳು" ಕುರಿತ ವಿಚಾರ ಸಂಕಿರಣ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಔಷಧ ಗುಣಮಟ್ಟ ಮತ್ತು ಮಾರುಕಟ್ಟೆಗೆ ಕೃತಕ ಬುದ್ಧಿಮತ್ತೆ ವರದಾನ ಎಂದು ತುಮಕೂರಿನ ಸಹೀದಾ ಫಾರ್ಮಾಜಿ ತಾಂತ್ರಿಕ ಮುಖ್ಯಸ್ಥರಾದ ಪಿ.ಮಾದೇಶ್‌ರವರು ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಆವರಣದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಔಷಧ ಇಲಾಖೆ ಹಾಗೂ ಬೆಂಗಳೂರಿನ ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್ ಇವರು ಸಂಯುಕ್ತಾಶ್ರಯದಲ್ಲಿ ನಿಯಂತ್ರಣ ವ್ಯವಹಾರಗಳ ವಿಭಾಗದ ಸಹಯೋಗದೊಂದಿಗೆ "ನಾವೀನ್ಯತೆ ಮತ್ತು ಡಿಜಿಟಲ್ ಪರಿವರ್ತನೆಯ ಯುಗದಲ್ಲಿ ನಿಯಂತ್ರಣ ವ್ಯವಹಾರಗಳು" ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಡಿಟೋರಿಯಂ ಸಭಾಂಗಣದಲ್ಲಿ ಜುಲೈ 11 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಉದ್ಘಾಟಿಸಿದ್ದ ಪಿ.ಮಾದೇಶ್‌ರವರು ಮಾತನಾಡುತ್ತಾ ಹಿಂದೆ ಒಂದು ಔಷಧಿ ಅಥವಾ ಮಾತ್ರೆಯನ್ನು ತಯಾರು ಮಾಡಿ ಅದನ್ನು ಮಾರುಕಟ್ಟೆ ಮತ್ತು ಹೊರದೇಶಗಳಿಗೆ ಕಳುಹಿಸಲು ಕನಿಷ್ಠ 10 ರಿಂದ 15 ವರ್ಷ ಸಮಯ ಬೇಕಾಗುತ್ತಿತ್ತು ಆದರೆ ಬದಲಾದ ತಂತ್ರಜ್ಞಾನದಿಂದಾಗಿ ಈಗ ಕೇವಲ ಎರಡು ಅಥವಾ ಮೂರು ವರ್ಷಗಳ ಅವಧಿಯಲ್ಲಿ ಔಷಧಿಯ ಗುಣಮಟ್ಟ ಮತ್ತು ಮಾರುಕಟ್ಟೆ ಮಾಡಲು ಇದರಿಂದ ಅನುಕೂಲವಾಗಿದೆ. ಯಾವುದೇ ಔಷಧವನ್ನು ನಿಯಂತ್ರಣ ಮಂಡಳಿ ಕಾನೂನಿನ ಅಧೀನಕ್ಕೆ ಒಳಪಡಿಸಿ, ಅದರ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್‌ರವರು ಮಾತನಾಡಿ, ಔಷಧ ತಯಾರಿಕೆಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ. ಯಾವುದೇ ದೇಶದ ನಿಯಂತ್ರಣ ಮಂಡಳಿ ತಿರಸ್ಕರಿಸಲಾಗದಂತಹ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಕಾಪಾಡಿಕೊಳ್ಳುವ ಕಡೆಗೆ ಔಷಧ ವಿಜ್ಞಾನ ವಿದ್ಯಾರ್ಥಿಗಳು ಹೆಚ್ಚು ಗಮನ ಹರಿಸಲು ಬಹಳ ಹಿಂದೆ ಆಟೊಬಯೋಟಿಕ್ ಔಷಧಿಗಳ ಸಂಖ್ಯೆ ಬಹಳ ವಿರಳವಾಗಿತ್ತು ಆದರೆ ತಂತ್ರಜ್ಞಾನದ ಫಲದಿಂದಾಗಿ ಇಂದು ಮಾರುಕಟ್ಟೆಯಲ್ಲಿ ಬ್ರಾಂಡೆಡ್ ಜೀವರಕ್ಷಕ ಔಷಧಿಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿವೆ ಎಂದರು. ಮುಂದಿನ ತಲೆಮಾರಿನ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಔಷಧ ತಯಾರಿಕೆಯಲ್ಲಿನ ದುಷ್ಪರಿಣಾಮ ಬಗ್ಗೆ ಮತ್ತು ಕಾರ್ಯ ಕ್ಷಮತೆಯ ಬಗ್ಗೆ ಔಷಧ ತಯಾರಕರು ನಿಗಾ ಪಡಿಸಬೇಕು ಎಂದರು.

ಶ್ರೀದೇವಿ ಸಂಸ್ಥೆಯ ಮಾನವಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಹಾಟೀಲ್‌ರವರು ಮಾತನಾಡಿ, ಜಾಗತಿಕ ಔಷಧಿ ರಫ್ತಿನಲ್ಲಿ ಭಾರತ ಪ್ರಸ್ತುತ ಮಿಶ್ರದಲ್ಲೇ ಮುಂಚೂಣಿಯಲ್ಲಿದೆ. ಔಷಧ ವಿಜ್ಞಾನ ಕ್ಷೇತ್ರ ಅಗಾಧವಾಗಿದ್ದು ದಿನ ವಿಸ್ತಾರಗೊಳ್ಳುತ್ತಿದೆ ಹೀಗಾಗಿ ಈ ವಲಯದಲ್ಲಿ ಹೆಚ್ಚಿನ ಉದ್ಯೋಗ ಅವಕಾಶಗಳು ಲಭಿಸುತ್ತಿದೆ. ಆದರೆಲ್ಲೂ ಕೋವಿಡ್ ಸಂದರ್ಭದಲ್ಲಿ ನಮ್ಮ ದೇಶದ ವಿಜ್ಞಾನಿಗಳು ಮತ್ತು ಔಷಧ ತಯಾರಿಕಾ ಕಂಪನಿಗಳು ನಿರ್ವಹಿಸಿದ ಪಾತ್ರಕ್ಕೆ ವಿಶ್ವದಲ್ಲೇ ಮೆಚ್ಚುಗೆ ವ್ಯಕ್ತಪಡಿಸಿದೆ. ಔಷಧ ಉದ್ಯಮವಲಯ ದೇಶದ ಪರಮಾಣಕ್ಕೆ ಮತ್ತಷ್ಟರ ಕೊಡುಗೆ ನೀಡುತ್ತಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಹೈದರಾಬಾದ್ ಅರಾಜಿನ್ ಲೈಫ್ ಸೈನ್ಸ್ಸ್ ಲಿಮಿಟೆಡ್‌ನ ಬಯಾಲಜಿ ಸೆಲ್ಯೂಷನ್ಸ್ ಕಾಪಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ. ಮಾತನಾಡಿ, ಔಷಧ ತಯಾರಿಕೆಯಲ್ಲಿ ಗುಣಮಟ್ಟ

ರಾಷ್ಟ್ರೀಯ ಲೋಕ್‌ಅದಾಲತ್‌ನಲ್ಲಿ ಗ್ರಾಹಕ ವಾಜ್ಯ ಇತ್ಯಾರ್ಥ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ,: ಗ್ರಾಹಕ ವ್ಯಾಜ್ಯಗಳನ್ನು ಕಕ್ಷಿದಾರರು ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಇತ್ಯರ್ಥಪಡಿಸಿಕೊಳ್ಳುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಗ್ರಾಹಕರ ಆಯೋಗದ ಪ್ರಭಾರಿ ಅಧ್ಯಕ್ಷರಾದ ರೇಣುಕಾದೇವಿ ದೇಶಪಾಂಡೆ ಅವರು ತಿಳಿಸಿದರು.

ಅವರು ಜು.10ರ ಶುಕ್ರವಾರ ರಾಮನಗರದ ಜಿಲ್ಲಾ ಗ್ರಾಹಕರ ಆಯೋಗದ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಅವರು ಮಾತನಾಡಿದರು.

ರಾಜಿ ಸಂಧಾನದ ಮೂಲಕ ಗ್ರಾಹಕರ ವ್ಯಾಜ್ಯಗಳನ್ನು ಇತ್ಯರ್ಥ ಮಾಡಿಕೊಳ್ಳುವುದರಿಂದ ಕಕ್ಷಿದಾರರಿಗೆ ಹೆಚ್ಚು ಅನುಕೂಲವಾಗಿದೆ. ಲೋಕ್ ಅದಾಲತ್‌ನಲ್ಲಿ 6 ಗ್ರಾಹಕ ವ್ಯಾಜ್ಯಗಳನ್ನು ಕೈಗೆತ್ತಿಕೊಳ್ಳಲಾಗಿತ್ತು ಈಪೈಕಿ ಎರಡು ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದ್ದು, 2 ಪ್ರಕರಣಗಳಲ್ಲಿ ರಾಜಿ ಸಂಧಾನಕ್ಕೆ ಕಕ್ಷಿದಾರರು ಸಮಯಾವಕಾಶ ಕೋರಿದರು. ಮತ್ತೆರಡು ಪ್ರಕರಣದ ವಿಚಾರಣೆ ಮುಂದೂಡಿದರು. ಲೋಕ್ ಅದಾಲತ್‌ನಲ್ಲಿ ಸಂದಾನಕಾರರಾಗಿ ಡಿಎಲ್ ಎಸ್ ಎ ಪ್ಯಾನಲ್ ವಕೀಲರಾದ ಗೀತಾ ಎಚ್.ಡಿ ಅವರು ಹಾಲ್ಕೊಂಡಿದ್ದರು. 20 ದಿನದಲ್ಲಿ ಬೈಕ್ ನೀಡಲು ಒಪ್ಪಿಗೆ: ಟಿವಿಎಸ್ ಕಂಪನಿಯ ಐಕ್ಯೂಬ್ ಎಲೆಕ್ಟ್ರಿಕ್ ಬೈಕ್ ಖರೀದಿ ಮಾಡಲು ಚನ್ನಪಟ್ಟಣ ತಾಲೂಕಿನ ಹುಣ್ಣಿಗೆರೆ ಗ್ರಾಮದ ರೈತ ಕುಮಾರ್ ಎಸ್.ಪಿ ಅವರು ಆನ್‌ಲೈನ್ ಮೂಲಕ ಬುಕ್ಕಿಂಗ್ ಮಾಡಿದ್ದರು. ಬ್ಯಾಂಕ್ ಮೂಲಕ ರೂ. 1.33 ಲಕ್ಷ ಹಣವನ್ನು ಪಾವತಿ ಮಾಡಿದ್ದರು. ಆದರೆ ಸಂಸ್ಥೆ ಒಂದು ತಿಂಗಳಲ್ಲಿ ಬೈಕ್ ವಿತರಣೆ ಮಾಡುವುದಾಗಿ ಹೇಳಿತ್ತು ಆದರೆ ಕಂಪನಿ ನಾಲ್ಕು ತಿಂಗಳಾದರೂ ಗ್ರಾಹಕರಿಗೆ ಬೈಕ್ ನೀಡಿರಲಿಲ್ಲ. ದೂರವಾಣಿ, ಮೇಲ್ ಮೂಲಕ ಸಂವಹನ ಮಾಡಿದರೂ ಸೂಕ್ತ ಸ್ಪಂದನೆ ದೊರೆಯಲಿಲ್ಲ. ನಂತರ ರೈತ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ಮೇ.30 ರಂದು ದೂರು ದಾಖಲಿಸಿದ್ದರು.

ಈ ಪ್ರಕರಣವನ್ನು ಆಯೋಗದ ಅಧ್ಯಕ್ಷರು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲು ಪ್ರಯತ್ನಿಸಿದರು. ಅಂತಿಮವಾಗಿ ಕಂಪನಿ 20 ದಿನದಲ್ಲಿ ಗ್ರಾಹಕರಿಗೆ ಬೈಕ್ ನೀಡುವುದಾಗಿ ಭರವಸೆ ನೀಡಿದ ಹಿನ್ನೆಲೆ ಪ್ರಕರಣ ಇತ್ಯರ್ಥ ವಾಡಲಾಯಿತು. ಟೈಲ್ಸ್ ಕಂಪನಿ ವಿರುದ್ಧ ದಾಖಲಾಗಿದ್ದ ಮತ್ತೊಂದು ಪ್ರಕರಣವನ್ನು ಸಹ ಗ್ರಾಹಕರ ಆಯೋಗ ಇತ್ಯರ್ಥಪಡಿಸಿದರು.

ಚನ್ನಪಟ್ಟಣ ತಹಶೀಲ್ದಾರ್ ಮೇಲೆ ಹಲ್ಲೆಮಾಡಿ ವಿವಸ್ತ್ರಗೊಳಿಸಿ 10ಲಕ್ಷರೂ.ಗೆ ಬ್ಲ್ಯಾಕ್‌ಮೇಲ್;

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣದ ತಹಶೀಲ್ದಾರ್ ಬಿ.ಎನ್.ಗಿರೀಶ್ ಅವರನ್ನು ಹಣ್ಣೆಲ್ತಪ್ಪಿಸಿ, ವಿವಸ್ತ್ರಗೊಳಿಸಿ ಹಲ್ಲೆಗೈದು, ವಿಡಿಯೋ ಚಿತ್ರೀಕರಿಸಿಕೊಂಡು 10 ಲಕ್ಷ ರೂ.ಗೆ ಬ್ಲಾಕ್‌ಮೇಲ್ ಮಾಡಿದ ಘಟನೆ ಬೆಳಕಿಗೆ ಬಂದಿದೆ. ಮೈಸೂರು ಮೂಲದ ರೌಡಿಶೀಟರ್ ಅನುಷ್, ಶೋಭರಾಜ್ ಮತ್ತು ನವೀನ್ ಎಂಬುವರು ಈ ಕೃತ್ಯ ಎಸಗಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣದ ತ 'ಹಶೀಲ್ದಾರ್ ಬಿ.ಎನ್.ಗಿರೀಶ್ ಅವರನ್ನು ಹಣ್ಣೆಲ್ತಪ್ಪಿಸಿ, ವಿವಸ್ತ್ರಗೊಳಿಸಿ ಹಲ್ಲೆಗೈದು, (ಭಚಿಣಿಟಿಣಿಜಜ) ವಿಡಿಯೋ ಚಿ ತ್ರೀಕರಿಸಿಕೊಂಡು 10 ಲಕ್ಷ ರೂ. ಗೆ' ಬ್ಲಾಕ್‌ಮೇಲ್ ಮಾಡಿದ ಘಟನೆ ಬೆಳಕಿಗೆ ಬಂದಿದೆ. ಮೈಸೂರು ಮೂಲದ ರೌಡಿಶೀಟರ್ ಅನುಷ್, ಶೋಭರಾಜ್ ಮತ್ತು ನವೀನ್ ಎಂಬುವರು ಈ ಕೃತ್ಯ ಎಸಗಿದ್ದಾರೆ. ಆರೋಪಿಗಳು ತಹಶೀಲ್ದಾರ್ ಗಿರೀಶ್ ಅವರಿಗೆ ಜ್ಯೂಸ್‌ನಲ್ಲಿ ಮದ್ಯ ಬೆರೆಸಿ ಕುಡಿಸಿ ಪ್ರಜ್ಞಾಹೀನರನ್ನಾಗಿಸಿದ್ದಾರೆ. ನಂತರ ಅ ವರನ್ನು ವಿವಸ್ತ್ರಗೊಳಿಸಿ, ಹಲ್ಲೆ ನಡೆಸಿ ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಜೂನ್ 28ರಂದು ಘಟನೆ ನಡೆದಿದ್ದು, ಗಿರೀಶ್ ಅವರು ಚನ್ನಪಟ್ಟಣ ಟೌನ್ ಪೊಲೀಸ್ ಠಾಣೆಗೆ ಜುಲೈ 1ರಂದು ದೂರು ಕೊಟ್ಟಿದ್ದಾರೆ. ಈ ಸಂಬಂಧ ಬೆಂಗಳೂರಿನ ಅನುಷ್ ಅಲಿಯಾಸ್ ಅನುಷ್ ಶಿವಪ್ಪ, ಶೋಭರಾಜ್ ಹಾಗೂ ನವೀನ್ ವಿರುದ್ಧ ಪ್ರಕರಣ ದಾಖಲಾಗಿದೆ. ಸದ್ಯ ಅನುಷ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ತಹಶೀಲ್ದಾರ್ ನೀಡಿದ ದೂರಿನಲ್ಲೇನಿದೆ?

ಜೂನ್ 28ರಂದು ತಹಶೀಲ್ದಾರ್ ಗಿರೀಶ್ ಅವರನ್ನು ನೋಡಲು ಬಂದಿದ್ದ ಮೂವರೂ ಆರೋಪಿಗಳು ಮೊದಲಿಗೆ ವಸತಿ ಗೃಹದಲ್ಲೇ ಏಳು ಸೇವಿಸಿದ್ದಾರೆ. ಈ ಸಂದರ್ಭದಲ್ಲಿ ತಹಶೀಲ್ದಾರ್ ಅವರಿಗೆ ಕುಡಿಯಲು ಜ್ಯೂಸ್ ಕೊಟ್ಟಿದ್ದಾರೆ. ಸ್ವಲ್ಪ ಹೊತ್ತಲ್ಲೇ ತಹಶೀಲ್ದಾರ್ ಪ್ರಜ್ಞೆ ಕಳೆದುಕೊಂಡಿದ್ದಾರೆ. ಈ ವ್'ಳೆ ಆರೋಪಿಗಳು ಗಿರೀ ಶ್ ಅವರನ್ನು ವಿವಸ್ತ್ರಗೊಳಿಸಿ ವಿಡಿಯೋ ಸ್'ರೆಹಿಡಿದುಕೊಂಡಿದ್ದಾರೆ. ಬಳಿಕ ಹಲ್ಲೆ ಮಾಡಿದ್ದು, ಈ ಸಂದರ್ಭದಲ್ಲಿ ಎಚ್ಚರಗೊಂಡಿದ್ದಾರೆ.

ಆಗ ಅವರ ಚಿನ್ನದ ಉಂಗುರ, ಚಿನ್ನದ ಸರ, ಬೆಳ್ಳಿಯ ಉಡುದಾರ ಕಿತ್ತುಕೊಂಡಿದ್ದಾರೆ. ಇದಾದ ಬಳಿಕ ವಿಡಿಯೋ ಇಟ್ಟುಕೊಂಡು 10 ಲಕ್ಷಕ್ಕೆ ಬ್ಲಾಕ್‌ಮೇಲ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಅಷ್ಟೇ ಅಲ್ಲದೆ ಇಡೀ ರಾತ್ರಿ ಗೃಹ ಬಂಧನದಲ್ಲಿಟ್ಟು ದೈಹಿಕ ಹಿಂಸೆ ಹಾಗೂ ಹಲ್ಲೆ ನಡೆಸಲಾಗಿದೆ ಎಂದು ಗಿರೀಶ್ ಅವರು ದೂರಿನಲ್ಲಿ ತಿಳಿಸಿದ್ದಾರೆ. ಸದ್ಯ ರೌಡಿಶೀಟರ್ ಅನುಷ್‌ನನ್ನು ಪೊಲೀಸರು ಬಂಧಿಸಿದ್ದು, ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಶೋಧ ಮುಂದುವರಿದಿದೆ.

ರಾಮನಗರ ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ವಿಶೇಷ ಸುದ್ದಿಗಾಗಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ ಬಿಡದಿ ಮಹೇಶ್ : ವರದಿಗಾರರು 99728 34055

12 ರಂದು ಜಾನಪದ ಲೋಕದಲ್ಲಿ ಲೋಕ ಸಿರಿ ತಿಂಗಳ ಅತಿಥಿ ಕಾರ್ಯಕ್ರಮ:

ಕ ್ಲೋಲಾಟ ಕಲಾವಿದೆ/ಜಾನಪದ ಹಾಡುಗಾರ್ತಿ ಪುಟ್ಟಲಕ್ಷ್ಮಮ್ಮ ಅವರೊಂದಿಗೆ ಸಂವಾದ

ರಾಮನಗರ,: ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ "ಲೋಕಸಿರಿ ತಿಂಗಳ ಅತಿಥಿ-118, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ ಪ್ರತಿ ತಿಂಗಳ ನಡೆಯುವ ತಿಂಗಳ ಅ ತಿಥಿ" ಕಾರ್ಯಕ್ರಮವನ್ನು ಜು. 12ರ ಬ ,ಾನುವಾರ, ಮಧ್ಯಾಹ್ನ 3 ಗಂಟೆಗೆ ರಾಮನಗರದ ಜಾನಪದ ಲೋಕದಲ್ಲಿ ಏರ್ಪಡಿಸಲಾಗಿದೆ.

ಲೋಕಸಿರಿ ತಿಂಗಳ ಅತಿಥಿ ಕಾರ್ಯಕ್ರಮದ ಅ ತಿಥಿಯಾಗಿ ಕೋಲಾಟ ಕಲಾವಿದೆ/ ಜಾನಪದ ಹಾಡುಗಾರ್ತಿ ಪುಟ್ಟಲಕ್ಷ್ಮಮ್ಮ ಅವರು ಭಾಗವಹಿಸಿರುವರು.

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕ 'ರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಗೌರವ ಉಪಸ್ಥಿತಿ ವಹಿಸುವರು. ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ಶಿವಪ್ಪ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶಿರಾ ನಗರದಲ್ಲಿ ಕೊಳಚೆ ನೀರು ರಸ್ತೆಗೆ: ಸಾಂಕ್ರಾಮಿಕ ರೋಗದ ಆತಂಕ, ಸಾರ್ವಜನಿಕರ ಆಕ್ರೋಶ

ಸೂರ್ಯಪ್ರಗತಿನ್ಯೂಸ್.ಕಾಂ

ಶಿರಾ :ನಗರದ ಪ್ರಮುಖ ಸಂಚಾರ ಕೇಂದ್ರವಾಗಿರುವ ಖಾಸಗಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಮೀಪ ಯಜಮಾನಿಕೆ ತುಂಬಿ ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಜೊತೆಗೆ ಸಾಂಕ್ರಾಮಿಕ ರೋಗ ಹರಡುವ ಭೀತಿಯೂ ಎದುರಾಗಿದೆ.

ಸರಕಾರಿ, ಖಾಸಗಿ ಆಸ್ಪತ್ರೆಗಳು, ಮಾರುಕಟ್ಟೆ ಮತ್ತು ವಾಣಿಜ್ಯ ಮಳಿಗೆಗಳು ಇರುವ ಈ ಪ್ರದೇಶದಲ್ಲಿ ಪ್ರತಿದಿನ ಸಾವಿರಾರು ಜನರು ಸಂಚರಿಸುತ್ತಾರೆ. ಆದರೆ ರಸ್ತೆಯ ಮೇಲೆ ಹರಿಯುತ್ತಿರುವ ಕೊಳಚೆ ನೀರು ಮತ್ತು ದುರ್ವಾಸನೆಯಿಂದ ಮೂಗು ಮುಚ್ಚಿಕೊಂಡೇ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ನಗರಸಭೆಯ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಯಜಮಾನಿಕೆ ನೀರು ಸರಾಗವಾಗಿ ಹರಿಯುತ್ತಿಲ್ಲ. ಇದರಿಂದ ನಗರದ ಹಲವು ಭಾಗಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ಕೊಳಚೆ ನೀರು ಉಕ್ಕಿ ಹರಿಯುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೂ ನಗರಸಭೆ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಗಂಭೀರ ಸಮಸ್ಯೆಗೆ ತಾಕ್ಷಣ ಪರಿಹಾರ ಕಲ್ಪಿಸಲು ಜ ನಪ್ರತಿನಿಧಿಗಳು, ವಿಶೇಷವಾಗಿ ಸ್ಥಳೀಯ ಶಾಸಕರು ಮಧ್ಯಪ್ರವೇಶಿಸಬೇಕು ಎಂದು ಆಶಯ ವ್ಯಕ್ತಪಡಿಸಿದ್ದಾರೆ.

ಈ ವಾರ್ಡ್‌ನ ನಗರಸಭೆ ಸದಸ್ಯೆ ಉಮಾ ವಿಜಯರಾಜ್ ಮಾತನಾಡಿ, ಯಜಮಾನಿಕೆ ಸಮಸ್ಯೆ ಕುರಿತು ಹಲವು ಬಾರಿ ನಗರಸಭೆ ಆಯುಕ್ತರು ಹಾಗೂ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ಶಾಶ್ವತ ಪರಿಹಾರವಿದಲ್ಲಿ, ತಾತ್ಕಾಲಿಕ ಕ್ರಮ ಕೈಗೊಳ್ಳುವುದಕ್ಕೂ ಅಧಿಕಾರಿಗಳು ಮುಂದಾಗಿಲ್ಲ. ಸಾರ್ವಜನಿಕರು ಪ್ರತಿನಿ ಸಂಕಷ್ಟ ಅನುಭವಿಸುತ್ತಿದ್ದರೂ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗೊಬ್ಬರ ವ್ಯಾಪಾರಿ ಜಯ ನಾರಾಯಣ್ ಅವರು, ನಮ್ಮ ಅಂಗಡಿಗೆ ಪ್ರತಿದಿನ ರೈತರು ಗೊಬ್ಬರ ಖರೀದಿಸಲು ಬರುತ್ತಾರೆ. ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿರುವುದರಿಂದ ಸುತ್ತಮುತ್ತ ಗಬ್ಬು ವಾಸನೆ ಆವರಿಸಿದೆ. ಇದರಿಂದ ಗ್ರಾಹಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ನಗರಸಭೆ ಆಯುಕ್ತ ರುದ್ರೇಶ್ ಅವರು, ನಗರದಲ್ಲಿ ಯಜಮಾನಿ ಕಾಮಗಾರಿ ಇನ್ನೂ ಸಂಪೂರ್ಣವಾಗಿ ಪೂರ್ಣಗೊಂಡಿಲ್ಲ. ಹಲವು ಕಡೆ ಎಸ್‌ಟಿಪಿ ಘಟಕಕ್ಕೆ ಸಂಪರ್ಕ ಕಲ್ಪಿಸಿಲ್ಲ. ಕೆಲವರು ಅನಧಿಕೃತವಾಗಿ ಯಜಮಾನಿ ಸಂಪರ್ಕ ಸಂಪರ್ಕಗಳನ್ನು ಪತ್ತೆಹಚ್ಚಿ ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಮಾಹಿತಿ ನೀಡಿದ್ದು, ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಇದರ ಜೊತೆಗೆ ಸಾರ್ವಜನಿಕರು ಯಜಮಾನಿಗೆ ಪ್ಯಾಡ್ ಸೇರಿದಂತೆ ಇತರೆ ತ್ಯಾಜ್ಯ ವಸ್ತುಗಳನ್ನು ಹಾಕುವುದರಿಂದಲೂ ಒಳಚರಂಡಿ ಬ್ಲಾಕ್ ಆಗುತ್ತಿದೆ. ಕನ ವಿರೇವಾಲಿಯಲ್ಲಿ ಮಸ್ಸೆಚ್ಚರಿಕೆ ಮಹಿಬರೆ ಇಂತಹ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ,: 2026–27ನೇ ಸಾಲಿಗೆ ತೋಟಗಾರಿಕೆ ಇಲಾಖೆ, ರಾಮನಗರ ತಾಲ್ಲೂಕಿಗೆ ಸಂಬಂಧಪಟ್ಟ ಮಾವು ಬೆಳೆಗೆ ವಿಮೆ ಮಾಡಿಸುವ ರೈತರು ಕೂಡಲೇ ನಿಗಧಿತ ಅರ್ಜಿಯೊಂದಿಗೆ ಪ್ರಕೃತ ಸಾಲಿನ ಭೂಮಿ ಹೊಂದಿರುವ ದಾಖಲೆಗಳಾದ ಪಹಣಿ, ಬ್ಯಾಂಕ್ ಖಾತೆ ಪುಸ್ತಕ, ಆರ್ಧಾನುಕೂಲ ಪ್ರಮಗಳೊಂದಿಗೆ ಆಯಾ ತಾಲ್ಲೂಕಿನ ಯಾವುದಾದರು ರಾಷ್ಟ್ರೀಯ ಅಧಿಕೃತ ಬ್ಯಾಂಕುಗಳಲ್ಲಿ ಗ್ರಾಮೀಣಾತ್ಮ ಸಾಮಾನ್ಯ ಸೇವಾಕೇಂದ್ರಗಳಲ್ಲಿ ನೋಂದಣಿ ಮಾಡಿಸಬಹುದಾಗಿರುತ್ತದೆ.

ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಲ್ಲಿ 2026–27 ನೇ ಸಾಲಿಗೆ ಅಧಿಸೂಚಿಸಿ ಹೊರಡಿಸಿರುವ ಬೆಳೆಗೆ ಗೆಗೆ ಸಾಲ ಪಡೆದಿರುವ/ಪಡೆಯುವ ರೈತರಿಗೆ ಕಡ್ಡಾಯವಾಗಿ ವಿಮೆಗೆ ಒಳಪಡಿಸಿದ್ದು ಹಾಗೂ ಬೆಳೆಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿರುತ್ತದೆ.

ರಾಮನಗರ ತಾಲ್ಲೂಕಿಗೆ ಸಂಬಂದಪಟ್ಟ ಬೆಳೆಗಳಿಗೆ ವಿ ಮೆ ಪಾಡಿಸುವ ರೈತರು ಕೂಡಲೇ ನಿಗಧಿತ ಅರ್ಜಿಯೊಂದಿಗೆ ಪ್ರಕೃತ ಸಾಲಿನ ಭೂಮಿ ಹೊಂದಿರುವ ದಾಖಲೆಗಳಾದ ಪಹಣಿ, ಬ್ಯಾಂಕ್ ಖಾತೆ ಪುಸ್ತಕ, ಆರ್ಧಾನುಕೂಲ ಪ್ರಮಗಳೊಂದಿಗೆ ಆಯಾ ತಾಲ್ಲೂಕಿನ ಯಾವುದಾದರು ರಾಷ್ಟ್ರೀಯ ಅಧಿಕೃತ ಬ್ಯಾಂಕುಗಳಲ್ಲಿ, ಗ್ರಾಮೀಣಾತ್ಮ ಸಾಮಾನ್ಯ ಸೇವಾಕೇಂದ್ರಗಳಲ್ಲಿ ನೋಂದಣಿ ಮ 'ಡಿಸಿ 'ಬಹುದಾಗಿರುತ್ತದೆ.ಈ ಯೋಜನೆಯಡಿ 2026–27ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತ ವಿಕೋಪಗಳಾದ (Localized Calamities) ಆಲಿಕಲ್ಲು ಮಳೆ) ಮತ್ತು ಮೇಘಸ್ಫೋಟ ಸಂಭವಿಸಿದ್ದಲ್ಲಿ ಆ ಬಿಮ್ಸ್‌ನಲ್ಲಿ ನ'ಮೂ ದಿಸಲಾದ ರಿಸ್ಕ್ ಅವಧಿಯೊಳಗೆ ಬೆಳೆಸಮೃ ಸ'ಭವ ವಿಸಿದರೆ ವಿಮೆ ಮಾಡಿಸಿರುವ ರೈತರು ಈ ಬ ಗ್ಗೆ ಸ'ಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ (ವಿಚಿಣಿಂ ಘಿಸ್ ಇಶಿಲಿಜಿಟಿ ಜಿಣಿಲಿಜಿಣಿಟಿಜಿಟಿ ಇಟಿಸ್ಟೂರೆನ್ಸ್ ಕಂಪನಿ ಟೋಲ್ ಫ್ರೀ ನಂಬರ್ 7065514447) ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿ ವರಗಳನ್ನುತ್ಪಾದನಾ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ ತಿಳಿಸಬೇಕು.

ಈ ಯೋ ಜನೆಯಲ್ಲಿ ಒಳಪಡಿಸಲಾಗುವ ಎಲ್ಲಾ ಬೆಳೆಗೆ ಗೆಗೆ ಬೆಳೆ ಸಾಲ ಪಡೆದಿರುವ / ಪಡೆಯುವ ರೈತರನ್ನು ಕಡ್ಡಾಯವಾಗಿ ಬೆಳೆವಿಮೆಗೆ ಒಳಪಡಿಸುವುದು, ನೊಂದಣಿಮಾಡಲು ಇಚ್ಛಿಸುವ ರೈತರು ಹತ್ತಿರದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ಮುಚ್ಚಳಿಕೆ ಪತ್ರ ನೀಡಬೇಕು ಹಾಗೂ ಬೆಳೆಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿ ಬೆಳೆ ವಿಮೆಗೆ ಒಳಪಡಿಸಲಾಗುವುದು ಎಂದು ತಿಳಿಸಿದೆ.

ಇಂದು ಭಾನುವಾರ ರಾಜ್ಯದ ಎಲ್ಲಾ ಉಪ ನೋಂದಣಿ ಕರ್ತವ್ಯ ನಿರ್ವಹಿಸಲಿವೆ

ಜುಲೈ 12 ರ ಭಾನುವಾರ ರಾಜ್ಯದ ಎಲ್ಲಾ ಉಪ ನೋಂದಣಿ ಕಚೇರಿಗಳು ಎಂದಿನಂತೆ ಕರ್ತವ್ಯ ನಿರ್ವಹಿಸಲಿವೆ – ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆ ಬೆಂಗಳೂರು, ರಾಜ್ಯಾದ್ಯಂತ ಇರುವ ಎಲ್ಲಾ ಉಪ ನೋಂದಣಿ ಕಚೇರಿಗಳು (Sub-Registrar Offices) 2026 ನೇ ಜುಲೈ 12 ರ ಭಾನುವಾರದಂದು ಸಾರ್ವಜನಿಕ ರಜಾ ದಿನವಾಗಿದ್ದರೂ ಸಹ, ಸಾರ್ವಜನಿಕರ ಅನುಕೂಲಕ್ಕಾಗಿ ಮತ್ತು ಇಲಾಖೆಯ ಕಾರ್ಯದೊತ್ತಡ ನಿವಾರಣೆಗಾಗಿ ಎಂದಿನಂತೆ ತೆರೆದಿದ್ದು, ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿವೆ.

ಈ ದಿನದಂದು ಸಾರ್ವಜನಿಕರು ಎಂದಿನಂತೆ ಆಸ್ತಿ ನೋಂದಣಿ, ಮುದ್ರಾಂಕ ಖರೀದಿ ಹಾಗೂ ಇ ಇಾಖೆಗೆ ಸಂಬಂಧಿಸಿದ ಇತರ ಸೇವೆಗಳನ್ನು ಪ'ಡೆದುಕೊಳ್ಳಬಹುದಾಗಿದೆ. ಸಾರ್ವಜನಿಕರು ಈ ವಿಶೇಷ ಅವಕಾಶದ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿದೆ.

ಕೈಗಾರಿಕಾ ಪ್ರದೇಶದಲ್ಲಿ ಬೀದಿ ಬದಿ ವ್ಯಾಪಾರಿಗಳ ಅಂಗಡಿ ತೆರವು ವ್ಯಾಪಾರಸ್ಥರು ತೀವ್ರ ಆಕ್ರೋಶ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಅಭಿವೃದ್ಧಿಯ ಹೆಸರಲ್ಲಿ ರಾಜಕೀಯ ಮಾಡಬೇಡಿ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ ; ಕೇಂದ್ರ ವಿ. ಸೋಮಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ:680 ಕೋಟಿ ವೆಚ್ಚದಲ್ಲಿ, ಸಿರಾ-ಪೈಲೇಗಹಳ್ಳಿ ಹೈವೇ ಕಾಮಗಾರಿಗೆ ಅತಿ ಶೀಘ್ರದಲ್ಲಿ ಚಾಲನೆ ದೊರೆಯಲಿದೆ ಎಂದು ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಭರವಸೆ ನೀಡಿದರು.

ಹಿಂದೂಪುರ ಕಡೂರು ವ್ಯಾಪ್ತಿಯ ಹಾಲ್ಕುರಿಕೆ ಬಳಿ ಶನಿವಾರ 24 ಎಕರೆ ಪ್ರದೇಶದಲ್ಲಿ ನೂತನ ರೈಲ್ವೆ ನಿಲ್ದಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಶೀಘ್ರದಲ್ಲೇ ನ್ಯಾಷನಲ್ ಹೈವೆ ಗೆ ಚಾಲನೆ ನೀಡಲಿದ್ದು, 2 ವರ್ಷದೊಳಗೆ ಮಧುಗಿರಿ ಮತ್ತೊಂದು ಬೈಪಾಸ್ ನೀಡಲಿದ್ದು, ಮುಂದಿನ ದಿನಗಳಲ್ಲಿ ಮಧುಗಿರಿಯಂತೆ ಚಿತ್ರಾವತಿಸ್ಟೇಷನ್ ಬದಲಾಯಿಸುತ್ತೇವೆ. ಅಭಿವೃದ್ಧಿಯಲ್ಲಿ ರಾಜಕೀಯ ಮಾಡಬೇಡಿ ಎಂದು ಪ್ರಧಾನಿ ಮೋದಿ ಹೇಳಿದ್ದು, 3 ಕಿ.ಮಿ ವೆಚ್ಚದಲ್ಲಿ ಮಧುಗಿರಿ ಪಟ್ಟಣದೊಳಗೆ ಬೈಪಾಸ್ ಹಾದು ಹೋಗಲಿದ್ದು ಇದಕ್ಕೆ 40 ಕೋಟಿ ಮಂಜೂರು ಮಾಡಲಾಗಿದೆ ಎಂದರು.

ಪ್ರಧಾನಿ ಮೋದಿಯವರು ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಿದ್ದು, 2 ಲಕ್ಷ 93 ಸಾವಿರ ಕೋಟಿ ರೈಲ್ವೆಗೆ ನೀಡಿದ್ದಾರೆ. 24 ಎಕರೆಯಿಷ್ಟು ಪ್ರದೇಶವನ್ನು ಯಾವುದೇ ತಾಲೂಕಿನಲ್ಲಿ ರೈಲ್ವೆಗೆ ನೀಡಿದ ಉದಾಹರಣೆ ಇಲ್ಲ. ಆದರೆ ಮಧುಗಿರಿ ಕ್ಷೇತ್ರದಲ್ಲಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಮಧುಗಿರಿ ಇತಿಹಾಸದಲ್ಲಿ ಇದೊಂದು ವಿಶೇಷ ಸ್ಥಿಲಿಗಿ ಸುಮಾರು 15 ವರ್ಷಗಳ ಹಿಂದೆಯೇ ಕ್ಷೇತ್ರದಲ್ಲಿ ರೈಲ್ವೆ ನಿಲ್ದಾಣ ಆಗಬೇಕಿತ್ತು ಆದರೆ ಕಿಚ್ಚಿಡಿ ಹಾಳಾಗಬಾರದು ಎಂಬ ಉದ್ದೇಶದಿಂದ ತಡವಾಯಿತು. 24 ಎಕರೆ ಪ್ರದೇಶಗಳಲ್ಲಿ ರೈಲ್ವೆ ನಿಲ್ದಾಣ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಕೇಂದ್ರ ಸಚಿವ ಸೋಮಣ್ಣನವರು ಮಧುಗಿರಿ ವಿಕಲಾಂಗ ಚೇತನಿಕ್ಕೆ ಕೇಬಲ್ ಕಾರ್ ವಿಚಾರದಲ್ಲಿ ಆಸಕ್ತಿ ವಹಿಸಿದ್ದಾರೆ. ಪ್ರವಾಸೋದ್ಯಮ ಇಲಾಖೆ ಅನುಮತಿ ಪಡೆಯುವ ವಿಶ್ವಾಸವಿದ್ದು, ಶೀಘ್ರದಲ್ಲೇ ತಿರುಪತ್ಯಾನ ನೆರವೇರಿಸುವ ವಿಶ್ವಾಸವಿದೆ ಎಂದರು.

ಮಧುಗಿರಿ ಬರಪೀಡಿತ ಪ್ರದೇಶ. ಇಲ್ಲಿ ಯಾವುದೇ ಶಾಶ್ವತ ನೀರಾವರಿ ಯೋಜನೆಗಳಿಲ್ಲ. ಬರಪೀಡಿತ ಪ್ರದೇಶ ಹಗಲಿಗೆ ನೀರು ಹರಿಸಲು ಕೇಂದ್ರ ರಾಜ್ಯ ಸರ್ಕಾರಗಳು ಕ್ರಮವಹಿಸಬೇಕು. ಕ್ಷೇತ್ರಕ್ಕೆ ಎತ್ತಿನಹೊಳೆ ಮೂಲಕ ನೀರು ಹರಿಸಲು ಹಾಸನದ ಬಳಿ ಕೆನಾಲ್ ನಿರ್ಮಾಣವಾದರೆ ಈ ಭಾಗಕ್ಕೆನೀರಾವರಿ ಯೋಜನೆಗಳು ಲಭ್ಯವಾಗಲಿದೆ. ಕ್ಷೇತ್ರದಲ್ಲಿ ಕೆರೆಗಳ ಪುನರುಜ್ಜೀವನ ಕಾರ್ಯ ಕೈಗೊಳ್ಳಲಾಗಿದ್ದು, ಈಗಾಗಲೇ ಸಕಲೇಶಪುರದಲ್ಲಿ ಎತ್ತಿನಹೊಳೆ ನೀರು ಜಾಮ್ ಮಾಡಲಾಗುತ್ತಿದ್ದು, ವಾಣಿವಿಲಾಸಕ್ಕೆ ನೀರು ಹರಿ ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಳೆ ಬೀಳಲಿದ್ದು ಯಾವುದೇ ಆತಂಕ ಬೇಡ. ಇಷ್ಟಮಗೊಂಡನಹಳ್ಳಿ ಯಾಕರ್ಮಹಳ್ಳಿ ಮುದ್ದೇನಹಳ್ಳಿ ಬಳಿ ನೀರು ಹರಿದರೆ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಲಿದೆ. ರೈಲ್ವೆ ಕಾಮಗಾರಿ ಸಿಮಾಂಧ್ರದ ಬಳಿ ಪೂರ್ಣಗೊಂಡಿದ್ದು ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾದಾಗಿ ನಮ್ಮಲ್ಲಿ ಕಾಮಗಾರಿ ತಡವಾಗಿದೆ. ಆದರೆ ಕಾಮಗಾರಿ ಬೇಗ ಪೂರ್ಣ ಗೊಳಿಸಬೇಕು. 2027 ಡಿಸೆಂಬರ್ ಬೇಳೆಗೆ ಎಲ್ಲಾ ಕಾಮಗಾರಿಗಳಲ್ಲಿ ಮುಗಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ರಸಾದ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿಕೆ ರಾಜಣ್ಣ, ಪುರಸಭೆ ಮಾಜಿ ಅಧ್ಯಕ್ಷರಾದ ರಾಜಾಜಿಪೇಟೆ ಮಂಜುನಾಥ್, ಎಂ.ಕೆ. ನಂಜುಂಡಯ್ಯ ಎನ್. ಗಂಗಣ್ಣ, ಮುಖಂಡರಾದ ಎಂ ಜಿ ಶ್ರೀನಿವಾಸ್ ಮೂರ್ತಿ, ಎಲ್.ಸಿ. ನಾಗರಾಜು, ಹನುಮಂತರೆಡ್ಡಿ, ಲಕ್ಕಪತಿ, ತುಂಗೇಗೌಡ ರಾಮಣ್ಣ, ಕೆಎಸ್ ಪಾಂಡುರಂಗ ರೆಡ್ಡಿ, ತಾಲೂಕು ಜೆಡಿಎಸ್ ಅಧ್ಯಕ್ಷ ಶ್ರೀನಿವಾಸ್, ಗುತ್ತಿಗೆದಾರರ ರಾಜಗೋಪಾಲ್, ರಾಷ್ಟ್ರೀಯ ಹೆದ್ದಾರಿ ಅಭಿಯಂತರ ಲಕ್ಕಿಕಾಂತ್, ರೈಲ್ವೆ ಇಲಾಖೆಯ ಇಂಜಿನಿಯರ್ ಪ್ರಸಾದ್ ಇತರರಿದ್ದರು.

ಶಿಸ್ತುಬದ್ದರಾಗಿ, ಸಮಯವನ್ನು ವ್ಯರ್ಥಮಾಡದೇ, ತರಬೇತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ-ಜವಾಬ್ದಾರಿಯಿಂದ, ಶಿಸ್ತುಬದ್ದರಾಗಿ, ಸಮಯವನ್ನು ವ್ಯರ್ಥಮಾಡದೇ, ತರಬೇತಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಇದಕ್ಕೆ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಜವಾಬ್ದಾರರಾಗಬೇಕೆಂದು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಸೂಚಿಸಿದರು.

ಹಿಟ್ಟುನಿಧಿ ತೆಂಗಿನಶ್ರೀ ಭವನದಲ್ಲಿ ಎಸ್‌ಬಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಜಿಎಸ್‌ಟಿ ನಡೆದ ಉಚಿತ ಸಿಇಟಿ ನೀಟ್ ಹಾಗೂ ಜೆಇಇ ತರಬೇತಿಗೆ ನಡೆದ ಕೌನ್ಸಿಲಿಂಗ್ ನಲ್ಲಿ ಬಾಗವಹಿಸಿ ಮಾತನಾಡಿದ ಅವರು ಪ್ರತಿಭಾನುವಾರ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಸಿಇಟಿ ನೀಟ್ ಹಾಗೂ ಜೆಇಇ ತರಬೇತಿಯನ್ನು ನೀಡಲಾಗುವುದು ಇದು ನಮ್ಮ ತಾಲ್ಲೂಕಿನ ಹಂದನಕೆರೆ, ಹಂಚೆಗುಡಿಯಂತಹ ಹಾಗೂ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿರುವಂತಹ ಪಿಯುಸಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆಗ್ರಾಮಾಂತರ ಪ್ರದೇಶದಲ್ಲಿರುವಂತಹ ಪಿಯುಸಿ ವಿದ್ಯಾರ್ಥಿಗಳಿಗೆ ಸಹ ಈ ತರಬೇತಿಗೆ ಹೆಚ್ಚಿನ ಆಸಕ್ತಿ ಇರುವಂತಹ ಪ್ರಥಮ ಪಿಯುಸಿಯಲ್ಲಿ 196 ಹಾಗೂ ದ್ವಿತೀಯ ಪಿಯುಸಿಯಲ್ಲಿ 156 ಒಟ್ಟು 352 ವಿದ್ಯಾರ್ಥಿಗಳಿಗೆ ಪ್ರಥಮ ಪ್ರಯತ್ನದಲ್ಲಿಯೇ ಸಾಧನೆ ಮಾಡಿರುವಂತಹ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಇದರಲ್ಲಿ ಉತ್ತಮ ಅಂಕಗಳನ್ನು ಗಳಿಸಿದಂತಹ ಪ್ರಥಮ ಪಿಯುಸಿಯಲ್ಲಿ 75 ಹಾಗೂ ದ್ವಿತೀಯ ಪಿಯುಸಿಯಲ್ಲಿ 75 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಇಂದು ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೂ ಕೌನ್ಸಿಲಿಂಗ್ ನಡೆಸಲಾಗುತ್ತಿದೆ ಕಾರಣ ಈ ತರಬೇತಿಯು ಸಂಪನ್ನೂಲ ವ್ಯಕ್ತಿಗಳಿಂದ ಹಾಗೂ ವಿಶೇಷ ಪರಿಕರಗಳನ್ನೊಳಗೊಂಡಂತೆ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡಲಾಗುವುದು ಎಂದರು ಅದ್ದರಿಂದ ಕಾಟಚಾರಕ್ಕೆ ಬಂದು ಹೋಗುವಂತಹ ಅವಕಾಶಕೆಂಬಲ್ಲು ಇದರಲ್ಲಿ ವಿದ್ಯಾರ್ಥಿಗಳಿಗೆ ಎಷ್ಟುಜವಾಬ್ದಾರಿ ಇರುತ್ತದೆಯೋ ಅಷ್ಟೇ ಅವರ ಪೋಷಕರಿಗೂ ಇರಬೇಕು ಎಂದು ಎಚ್ಚರಿಸಿದರು.

ಎಂಬ ಉದ್ದೇಶದಿಂದ ಇಬ್ಬರಿಗೂ ಕೌನ್ಸಿಲಿಂಗ್ ನಡೆಸುವ ಮೂಲಕ ಅಂಪೈ ಮಾಡಲಾಗುತ್ತಿದ್ದು ನಾಳೆಯಿಂದ ತರಗತಿಗಳು ಪ್ರಾರಂಭವಾಗಲಿವೆ ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಬಿ.ಎಸ್ ಮಾತನಾಡಿ ಸುಮಾರು ವರ್ಷಗಳಿಂದ ಈಟ್ಸ್ಟ್ ವತಿಯಿಂದ ಬಿ.ಇಡಿ ತರಬೇತಿ ನಡೆಯುತ್ತಿದೆ ಆದರಂತೆ ಈ ಸಮಿಯಿಂಯ ಪ್ರಥಮವರ್ಷ ಒಬ್ಬರು ಅದ್ಧತರಂತೆ ವರ್ಷದ 2024-25ರಲ್ಲಿ ನಿವೃತ್ತ ತಹಸೀಲ್ದಾರ್ ಲಕ್ಷ್ಮಣಪ್ಪನವರ ಅದ್ಧತೆಯಲ್ಲಿ 2025-26ರಲ್ಲಿ ನಿವೃತ್ತ ಕೈತ್ತ ಶಿಕ್ಷಣಾಧಿಕಾರಿ ಸಾ.ಚಿ.ನಾಗೇಶ್ ನೇತೃತ್ವದಲ್ಲಿ, ಈ ಬಾರಿ 2026-27ರಲ್ಲಿ ತಾಲೂಕು ಮಡಿವಾಳ ಸಮಾಜದ ಅಧ್ಯಕ್ಷರಾದ ರಾಮಚಂದ್ರಾಚಾರಿಯವರು ಇವರ ಅದ್ಧತೆಯಲ್ಲಿ ನಡೆಯುತ್ತಿದ್ದು ಇವರ ಸಂಪೂರ್ಣ ಜವಾಬ್ದಾರಿಯನ್ನು ಶಾಸಕರಾದ ಸಿ.ಬಿ.ಸುರೇಶ್‌ಬಾಬು ವರಿಯ ಹೊಂದಿದ್ದು ಈ ತರಬೇತಿಯಲ್ಲಿ ಯಾವುದೆ ಜಾತಿ, ಧರ್ಮ, ಪಕ್ಷ ಬೇಧಭಾವವಿಲ್ಲದೆ ಎಲ್ಲರೂ ಒಂದೇ ಎಂಬ ಮಾಲಕ ಸಚಿವಯತ್ತಿದ್ದು ಇವನ್ನು ನಮ್ಮ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಪಹಣಿ ತಿದ್ದುಪಡಿ ಹೆಸರಿನಲ್ಲಿ ರೈತರ ಜಮೀನು ಮಂಗಮಾಯ...! ತಿದ್ದುಪಡಿ ಹೆಸರಿನಲ್ಲಿ ರೈತರ ಕಣ್ಣಿಗೆ ಮಣ್ಣು

ಸೂರ್ಯಪ್ರಗತಿನ್ಯೂಸ್.ಕಾಂ

ಗುಬ್ಬಿ:– ನೂರಾರು ವರ್ಷಗಳ ಇತಿಹಾಸವುಳ್ಳ ಅನುಭವದ ಜಾಗವನ್ನು ಹಾಗೆ ತಿದ್ದುಪಡಿ ಮಾಡುತ್ತೇವೆ ಎಂದು ಆ ಭಿಕಾರಿ ಗಳು ರೈತರನ್ನು ಒಕ್ಕಲೆಬ್ಬಿಸುವವ ಹುನ್ನಾರ ನಡೆಸಿದ್ದಾರೆ ಎಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ನಿಟ್ಟೂರು ಹೋಬಳಿ ಕೊಂಡ್ಲಿ ಗ್ರಾಮದ ಸರ್ವೆ ನಂಬರ್ 84 ರಲ್ಲಿ 500 ಎಕರೆಯಲ್ಲಿ ಸುಮಾರು 320 ಎಕರೆ ಭೂಮಿಯನ್ನು ಉಳುಮೆ ಮಾಡಿಕೊಂಡು ಸುಮಾರು 80 ಕುಟುಂಬ ವಾಸ ಮಾಡುತ್ತಿದ್ದು ಜೊತೆಯಲ್ಲಿ ತಮ್ಮ ಜಮೀನುಗಳಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಂತಹ ಜಾಗವನ್ನು ಭೂಸಿರಿ ಕಂಪನಿಗೆ ನೀಡಿದ್ದಾರೆ ಎಂದು ಸ್ಥಳೀಯ ರೈತರು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ.

ಸುಮಾರು 60 ವರ್ಷಗಳಿಂದ ಅಮಭವದಲ್ಲಿರುವ ಜಾಗದಲ್ಲಿ ನಮ್ಮ ತಾತ, ಮುತ್ತಾತರಿರಲ್ಲು ಶಾವವನ್ನು ಈ ಜಾಗದಲ್ಲಿ ಶವ ಸಂಸ್ಕಾರ ಮಾಡಲಾಗಿದೆ. ಜಾನುವಾರುಗಳನ್ನು ಈ ಜಾಗದಲ್ಲಿ ಸಾಕಿ ಕೊಂಡು ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತೇವೆ. ನಿರಂತರ ವ್ಯವಸಾಯ ಮಾಡಿಕೊಂಡು ಬರುತ್ತಿರುವ ರೈತರ ಜಮೀನನ್ನು ಆ ಭಿಕಾರಿಗಳು ಭಾಸಿ ಕಂಪನಿಗೆ ಗಣಿ ಪರಿವರ್ತನೆಗೆ ಮಂಜೂರು ಮಾಡಲು ಮುಂದಾಗಿದ್ದಾರೆ ಎಂಬುದು ಬಲ್ಲ ಮೂಲಗಳಿಂದ ಕೇಳಿ ಬರುತ್ತಿದೆ.

ಈ ಜಾಗದಲ್ಲಿ ವಾಸವಿರುವ ಎಲ್ಲಾ ರೈತರು ಆಡಿಕೆ, ತೆಂಗು,ಬಾಳೆ ಮಾವು ಇನ್ನು ಮುಂತಾದ ಬೆಳೆಗಳನ್ನು ಬೆಳೆದುಕೊಂಡು ಜೀವನ ಸಾಗಿಸುತ್ತಿದ್ದೇವೆ ಎಂದು ರೈತ ರುತೆ ಹೇಳುತ್ತಾರೆ. ಆದ್ದರಿಂದ ಈ ಜಾಗವನ್ನು ನಮಗೆ ಮಂಜೂರು ಮಾಡಿಕೊಡಬೇಕು ಎಂದು ರೈತರ ಬೇಡಿಕೆಯಾಗಿದೆ.ಈ ಜಾಗಕ್ಕೆ ಈಗಾಗಲೇ ಮಂಜೂರು ಪ್ರಮಾಣ ಪತ್ರ ಹಾಗೂ ಸಾಗುವಳಿ ಚೀಟಿಯನ್ನು 1990ರಲ್ಲಿ ನೀಡಲಾಗಿದೆ. ಅದರ ಜೊತೆಗೆ ನಮ್ಮ ಹೆಸರುಗಳಿಗೆ ಆರ್ ಟಿ ಸಿ ಆಧಾರ ಹಾಗೂ ನಮ್ಮಗಳಿಗೆ ದೊರೆಯುತ್ತಿದ್ದು, ಇತ್ತೀಚಿನ' ದಿನಗಳಲ್ಲಿ ಆಯರೆ 2008ರಲ್ಲಿ ನಮ್ಮ ಹೆಸರಲ್ಲಿರುವ ಪಹಣಿಯನ್ನು ತಿದ್ದುಪಡಿ ಮಾಡಿ ಭಾಸಗಿ ಕಂಪನಿಯವರಿಗೆ ಅಧಿಕಾರಿಗಳು ಕೈಜೋಡಿಸಿ ಪಹಣಿ ತಿದ್ದುಪಡಿ ಮಾಡುವಲ್ಲಿ ಮುಂದಾಗಿದ್ದಾರೆ ಎಂದು ರೈತರು ಆಕ್ರೋಶ ಹೊರಹಾಕಿದ್ದಾರೆ ಎಂದು ಕೊಣ್ಣಗೂರು ದೂರುತ್ತಾರೆ.ಸ್ಥಳದಲ್ಲಿ ರೈತರಾದ ಹೆಚ್.ಯೋಗೀಶ್ ಕೆಂಪಯ್ಯ ಜಯಮ್ಮ ವೆಂಕಟೇಶ್, ಅಂಜಿನಪ್ಪ ರಾಜಣ್ಣ ಹನುಮಂತಯ್ಯ, ತಿಮ್ಮರಾಯಪ್ಪ, ರಾಮಚಂದ್ರಯ್ಯ ಮುಡ್ಡಗಿರಯ್ಯ ವೆಂಕಟೇಶ್ಣ, ಗಂಗಯ್ಯ ರತ್ನಮ್ಮ ಸವಿತ, ಲಕ್ಷ್ಮಮ್ಮ ಗೌರಮ್ಮ ಮತ್ತಿತರರು ಇದ್ದರು.

ಚಿಂಪುಗಾನಹಳ್ಳಿಯಲ್ಲಿ ಅದ್ಧೂರಿಯಾಗಿ ಜರುಗಿದ ಮಾರಮ್ಮನ ಜಾತ್ರಾ ಮಹೋತ್ಸವ

ಹಳ್ಳಿಯಲ್ಲೂ ಆಗಿತ್ತು ಟ್ರಾಫಿಕ್ ಜಾಮ್; ಸಾವಿರಕ್ಕೂ ಹೆಚ್ಚು ಮರಿ ಒಡೆದು ಬಾಡೂಟ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು; ಕೊರಟಗೆರೆ ತಾಲೂಕಿನ ಹೊಳವನಹಳ್ಳಿ ಹೋಬಲಿ ವ್ಯಾಪ್ತಿಯ ಚಿಂಪುಗಾನಹಳ್ಳಿ ಗ್ರಾಮದಲ್ಲಿ ಸಂಭಾರು ಮೂರು ದಿನಗಳ ಕಾಲ ಗ್ರಾಮ ದೇವತೆ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ಹತ್ತು ಹಲವು ವಿಶೇಷತೆಗಳು ಗಮನ ಸೆಳೆದವು ದೇವಿಯ ಉತ್ಸವ ಪ್ರಾರಂಭವಾಗುತ್ತಿದ್ದಂತೆಯೇ ಗ್ರಾಮದ ಸುತ್ತ ಗುರ್ಜಾರಕ್ಷವನ್ನು ಎಳೆದು ಗ್ರಾಮಕ್ಕೆ ಯಾವುದೇ ರೀತಿಯ ತೊಂದರೆಯೂಗದಂತೆ ಗ್ರಾಮಸ್ಥರು ಆರತಿ ಸೇವೆ ಹಾಗೂ ವಿಶೇಷ ಪೂಜೆಗಳನ್ನು ನಡೆಸಿದರು.

ಇದೇ ಸಂದರ್ಭದಲ್ಲಿ ಊರರವರಿಗೆ ಮುತ್ತಾಯ್ಮ್ಮ ತೊರೆ ಮಾರಮ್ಮ ಸಪ್ಪಮ್ಮ ಮಾಜತ್ತೊದಮ್ಮ ಸೇರಿದಂತೆ ಸಪ್ತ ಮಾತೃಕೆಯ ದೇವರುಗಳಿಗೆ ಗ್ರಾಮಸ್ಥರು ಆರತಿ ಸೇವೆ ಪೂಜೆಯನ್ನು ನಡೆಸಿದರು. ಅನೇಕ ಭಕ್ತರು ಮಳೆ ಬೆಳೆಗಾಗಿ ಹಾಗೂ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಆರತಿಯ ಪೂಜೆಗಳನ್ನು ಸಲ್ಲಿಸಿದರು.

ಜಾತ್ರೆಗೆ ಆಗಮಿಸಿದ ಜನಸ್ತೋಮದಿಂದಾಗಿ ಹಳ್ಳಿಯಲ್ಲಿ ಟ್ರಾಫಿಕ್ ಜಾಮ್

ಚಿಂಪುಗಾನಹಳ್ಳಿ ಮಾರಮ್ಮ ಗ್ರಾಮದೇವತೆಯ ಜಾತ್ರಾ ಮಹೋತ್ಸವಕ್ಕೆ ವಿವಿಧ ಜಿಲ್ಲೆ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿದ ಒತೆ ಬಂಧುಗಳು ನೆಂಟರಿರುಗಳು ಆಗಮಿಸಿದ ಎತ್ತಿನಹೊಳೆ ನೀರು ಜಾಮ್ ಮಾಡಲಾಗುತ್ತಿದ್ದು, ವಾಣಿವಿಲಾಸಕ್ಕೆ ನೀರು ಹರಿ ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಳೆ ಬೀಳಲಿದ್ದು ಯಾವುದೇ ಆತಂಕ ಬೇಡ. ಇಷ್ಟಮಗೊಂಡನಹಳ್ಳಿ ಯಾಕರ್ಮಹಳ್ಳಿ ಮುದ್ದೇನಹಳ್ಳಿ ಬಳಿ ನೀರು ಹರಿದರೆ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಲಿದೆ. ರೈಲ್ವೆ ಕಾಮಗಾರಿ ಸಿಮಾಂಧ್ರದ ಬಳಿ ಪೂರ್ಣಗೊಂಡಿದ್ದು ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾದಾಗಿ ನಮ್ಮಲ್ಲಿ ಕಾಮಗಾರಿ ತಡವಾಗಿದೆ. ಆದರೆ ಕಾಮಗಾರಿ ಬೇಗ ಪೂರ್ಣ ಗೊಳಿಸಬೇಕು. 2027 ಡಿಸೆಂಬರ್ ಬೇಳೆಗೆ ಎಲ್ಲಾ ಕಾಮಗಾರಿಗಳಲ್ಲಿ ಮುಗಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ರಸಾದ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿಕೆ ರಾಜಣ್ಣ, ಪುರಸಭೆ ಮಾಜಿ ಅಧ್ಯಕ್ಷರಾದ ರಾಜಾಜಿಪೇಟೆ ಮಂಜುನಾಥ್, ಎಂ.ಕೆ. ನಂಜುಂಡಯ್ಯ ಎನ್. ಗಂಗಣ್ಣ, ಮುಖಂಡರಾದ ಎಂ ಜಿ ಶ್ರೀನಿವಾಸ್ ಮೂರ್ತಿ, ಎಲ್.ಸಿ. ನಾಗರಾಜು, ಹನುಮಂತರೆಡ್ಡಿ, ಲಕ್ಕಪತಿ, ತುಂಗೇಗೌಡ ರಾಮಣ್ಣ, ಕೆಎಸ್ ಪಾಂಡುರಂಗ ರೆಡ್ಡಿ, ತಾಲೂಕು ಜೆಡಿಎಸ್ ಅಧ್ಯಕ್ಷ ಶ್ರೀನಿವಾಸ್, ಗುತ್ತಿಗೆದಾರರ ರಾಜಗೋಪಾಲ್, ರಾಷ್ಟ್ರೀಯ ಹೆದ್ದಾರಿ ಅಭಿಯಂತರ ಲಕ್ಕಿಕಾಂತ್, ರೈಲ್ವೆ ಇಲಾಖೆಯ ಇಂಜಿನಿಯರ್ ಪ್ರಸಾದ್ ಇತರರಿದ್ದರು.

ಆಗಮಿಸಿದ್ದ ಬಂಧುಗಳು ಊರಿಗೆ ಹೊರಗೆ ವಾಹನ ನಿಲ್ಲಿಸಿ ಮನೆಗಳನ್ನು ಹುಡುಕಿ ಹೊಗುತ್ತಿದ್ದ ದೃಶ್ಯ ಕಂಡು ಬಂತು. ಬೂರೂರು ದಿನಗಳ ಜಾತ್ರೆಯ ಮಾದಲ್ಯ ದೇವಿಯ ಉದ್ಭವಿ ಮೆರವಣಿಗೆಯೊಂದಿಗೆ ಸಂಪನ್ನಗೊಂಡತ್ತು ಈ ಸಂದರ್ಭದಲ್ಲಿ ಚಿಂಪುಗಾನಹಳ್ಳಿ ಯುವ ಮಿತ್ರಬಂದ ಕುರುಕ್ಷೇತ್ರ ಪೌರಾಣಿಕ ಪ್ರದರ್ಶನವನ್ನು ಏರ್ಪಡಿಸಲಾಯಿತು. ಊರಿನ ಯಜಮಾನರು, ಕೈವಾಡದವರು, ಗೌಡರುಗಳು, ಸೇರಿದಂತೆ ಗ್ರಾಮಸ್ಥರು ಇತರರು ಉಪಸ್ಥಿತಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಸ್ತ್ರೀಯರಿಂದ ಮಾತ್ರ ದೇಶದ ಭವಿಷ್ಯವನ್ನು ಬದಲಾಯಿಸುವ ಶಕ್ತಿ ಇದೆ

ಸೂರ್ಯಪ್ರಗತಿನ್ಯೂಸ್.ಕಾಂ

ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಸಮಾಜಕ್ಕೆ ಮಾದರಿಯಾಗಿ ಬದುಕುವ ಸಂಕಲ್ಪ ಮಾಡೋಣ ಎಂದ ಅವರು ಮಹಿಳೆಯರು ಕಡ್ಡಾಯವಾಗಿ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವಂತೆ ನೋಡಿಕೊಳ್ಳಬೇಕು ಮುಂಬಿನ ದಿನಗಳಲ್ಲಿ ಲೋಕಸಭೆ ವಿಧಾನಸಭೆಗೂ ಮಹಿಳಾ ಮೀಸಲಾತಿ ಬರಲಿದೆ ಎಂದು ತಿಳಿಸಿದರು ಈ